ಚಟುವಟಿಕೆಯಲ್ಲಿ ಕಾಲಹರಣವಾಗಿ ಮರೆತೆಹೋಗುತ್ತಿತ್ತು. ಇವತ್ತೂ ಪುಸ್ತಕ ಮುಟ್ಟುವ ಮನಸಾಗಲಿಲ್ಲ. ವಿಶೇಷವಾಗಿ ತಯಾರಿಸಿಟ್ಟುಕೊಂಡಿದ್ದ ಬಾಣಗಳಲ್ಲಿ ಒಂದನ್ನು ಬೆಳಗ್ಗೆ ವಾಕಿಂಗಿನಲ್ಲಿ ಪ್ರಯೋಗಿಸಿದ್ದರು.

ಕೆಲವು ಅವರ ಮನೆಗಳ ಎದುರಿನ ರೂಮನ್ನೆ ಅಂಗಡಿಯಾಗಿ ಮಾಡಿಕೊಂಡವು. ಇಲ್ಲಿಯ ನಿವಾಸಿಗಳು ಕೆರೆ ಪಾರ್ಕು ಹೀಗೆ ವಿಹಾರಕ್ಕೆ ಬರುವ ಮೇಲ್ಮಟ್ಟದ ಪ್ರದೇಶವಾಸಿಗಳ ಬಾಯಿರುಚಿಗೆ ಆಸರೆಯಾಗಿರುವ ವಿಷಯ ಈಗಷ್ಟೆ ಗಮನಕ್ಕೆ ಬಂದಿತ್ತು. ಜಯರಾಮಯ್ಯ ಸಿಗದಿದ್ದರೆ ಎಷ್ಟೋ ಸಂಗತಿಗಳು ತಮ್ಮ ಜ್ಞಾನಭಂಡಾರಕ್ಕೆ ಸೇರುತ್ತಿರಲಿಲ್ಲ ಅನ್ನುವುದು ಹೊಳೆಯಿತು. ಆವತ್ತು ರಕ್ತದೊತ್ತಡಕ್ಕೆ ಒಳ್ಳೆಯದು ಅಂತ ಹಸಿರು ಬಣ್ಣದ್ದು ತೋರಿಸಿ ಅಂದನಲ್ಲ ಉದ್ದೇಶಪೂರ್ವಕ ಹಾಗಂದಿರಬಹುದೆ... ತನಗೆ ರಕ್ತದೊತ್ತಡವಿರುವುದನ್ನು ಹೇಗೆ ಪತ್ತೆ ಮಾಡಿದ? ಇರಲಾರದು ಅನಿಸಿತು. ನಿತ್ಯ ನೋಡುವ ಅದೇ ಜನರನ್ನು ಗಮನಿಸುತ್ತ ತಿರುಗಿಕೊಳ್ಳುತ್ತಿದ್ದಂತೆ ಗಂಧರ್ವನಗರದ ಅಗಲರಸ್ತೆ ಸುರುವಾಗಿ ಅಷ್ಟು ದೂರದಲ್ಲಿ ಜಯರಾಮಯ್ಯ ಸರಪಳಿ ಹಿಡಿದು ನಿಂತಿದ್ದು ಕಾಣಿಸಿತು. ರಸ್ತೆ ಪಕ್ಕದ ಕಾರುಗಳ ನಡುವೆ ಎರಡೂ ನಾಯಿಗಳು ಮೂಸುತ್ತ ಅನ್ವೇಷಣೆ ನಡೆಸುವುದನ್ನು ಬುದ್ಧಿಪೂರ್ವಕ ಕಡೆಗಣಿಸಿ ನಿಂತರು. 'ನಿಮ್ಮ ಮನೆಯವ್ರು ವಾಕಿಂಗ್ ಮಾಡಲ್ವ?' ಲೋಕಾಭಿರಾಮಕ್ಕೆ ದೀನಪ್ರಸಾದ್ ಕೇಳಿದರು. 'ಅವಳಿಗೆ ಆಸ್ತಮಾ, ಬೆಳಗಿನ ಥಂಡಿ ಹವೆ ಆಗೋಲ್ಲ. ನಮ್ಮ ಬಡಾವಣೆಯ ಮಹಿಳಾ ಸಂಘದ ಕಾರ್ಯದರ್ಶಿ ಸಾಲದ್ದಕ್ಕೆ. ಅವರ ಗುಂಪೇ ಬೇರೆ.' 'ಬಿಡುವಿನಲ್ಲಿ ಏನ್ಮಾಡತೀರ?' ವಿಚಾರಿಸಿದರು. 'ಓದೋ ಹವ್ಯಾಸ ಮೊದ್ಲಿಂದನು ಇತ್ತು. ಆದರೆ, ತಾಲ್ಲೂಕುಗಳ ಜವಾಬ್ದಾರೀಲಿ ಅಷ್ಟು ಸಮಯ ಸಿಗತಿರಲಿಲ್ಲ. ಈಗ ಓದತೀನಿ. ಫಿಲಾಸಫಿ ಕಡೆ ಒಲವು ಜಾಸ್ತಿ' ಯುದ್ಧದ ಅನಂತರ ರಾಜರು ದೇವಸ್ಥಾನ ಕಟ್ಟಿಸುತ್ತಿದ್ದರು, ಪಾಪಪ್ರಜ್ಞೆ ಹೆಚ್ಚಾದಷ್ಟು ಭಗವಂತನ ನೆನಪು ಜಾಸ್ತಿ ಅಂತ ಇತಿಹಾಸದ ಕ್ಲಾಸಿನಲ್ಲಿ ತಾನು ಹೇಳುತ್ತಿದ್ದುದು ನೆನಪಾಗಿ ಕುಹಕದ ನಗು ಒಳಗೆಲ್ಲೊ ಮೊಳೆಯಹೊರಟದ್ದು ಅಪಾರ್ಟ್‌ಮೆಂಟಿಂದ ಬಂದ ಗಡಸು ಸ್ವರದಲ್ಲಿ ಮರೆಯಾಯ್ತು. 'ನಿಮ್ಮನೆ ನಾಯಿ ಮಲಮೂತ್ರ ನಿಮ್ಮನೇಲಿ ಮಾಡಿಸ್ಬೇಕು. ನಮ್ಮ ಅಪಾರ್ಟ್‌ಮೆಂಟ್ ಎದುರ್‍ಯಾಕೆ ತಂದು ಮಾಡಸ್ತೀರ?' ಎದುರುಗಡೆ ಅಪಾರ್ಟ್‌ಮೆಂಟಿಂದಲೂ ಇಬ್ಬರು ಕೆಳಗೆ ಬಂದು ನಾಯಿ ಇಲ್ಲಿ ನಿಲ್ಲಿಸ್ಲೇಬೇಡಿ ಅಂತ ಗಲಾಟೆ ಸುರುಮಾಡಿದರು. 'ರಸ್ತೇನಲ್ಲಿ ಹೋಗುತ್ತ ಒಂದುಕಡೆ ಮಾಡುತ್ತೆ. ಅದಕ್ಕೆ ನಾವೇನು ಮಾಡೋದು?' ಅಂತ ದೀನಪ್ರಸಾದ್ ಸಮರ್ಥಿಸತೊಡಗಿದಂತೆ, 'ಅದೆಲ್ಲ ನಮಗ್ಗೊತ್ತಿಲ್ವ? ಮನೇಲೆ ಕಟ್ಟಿಕೊಳ್ಳಿ. ಇಲ್ಲಾ, ನಿಮದೇ ಅಂಗಳದಲ್ಲಿ ಬಿಡಿ ನೋಡ್ವ ಎಲ್ಲಿ ಮಾಡುತ್ತೆ ಅಂತ. ನಿಮ್ಮನೆ ಬಾಗಲಲ್ಲಿ ಬೇಡ; ಬೇರೆಯವ್ರ ಬಾಗಿಲಾದ್ರೆ ಸರಿ ಅಲ್ವಾ?' ಗದ್ದಲ ಜೋರಾಗುವ ಸೂಚನೆ ಸಿಕ್ಕಿ ಇಬ್ಬರೂ ಸರಪಳಿ ಎಳೆದುಕೊಂಡು ಮುಂದೆ ಸಾಗಲೆಬೇಕಾಯಿತು. ನೂರುಗಜ ಮುಂದೆ ಮತ್ತೊಂದು ಅಪಾರ್ಟ್‌ಮೆಂಟೆದುರು ಆ ಕೆಲಸ ಮಾಡಿಸಿ ಕೆರೆಯತ್ತ ಸಾಗಿದರು. ಇಲ್ಲಿವರೆಗೆ ಈ ಸಮಸ್ಯೆ ಎದುರಾಗಿರಲಿಲ್ಲ.

ಬೆಳಗಿನ ತಿಂಡಿ ತಿನ್ನುವಾಗ, 'ಆ ಸ್ಲಂನಲ್ಲಿ ತಿಂಡಿ ತಯಾರಿಸಿ ಎಲ್ಲೆಲ್ಲಿ ಮಾರತಾರೆ ಗೊತ್ತ!' ಅಂದರು ಹೆಂಡತಿಯೆದುರು.

'ಸ್ಲಂ ಅಂತ ಹೇಳಬೇಡಿ. ಕಡಮೆ ಶಕ್ತಿ ಇರೋರು ಮತ್ತೆ ಹೇಗಿರತಾರೆ? ನಮ್ಮ ಇಸ್ತ್ರಿ ಮಾಡೋ ರಾಮಣ್ಣ ಇರೋದು ಅಲ್ಲೆ, ಅದು ಹೋಗ್ಲಿ ನಮ್ಮನೆ ಕೆಲಸ ಮಾಡೋ ಚಂಪಾ ಬರೋದು